

بسم اللهِ الرّحمٰن الرّحیم

# ಅನುಗ್ರಹೀತ ರಮಝಾನ್ ತಿಂಗಳ ಪ್ರಾಮುಖ್ಯತೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **‘ಬೈತುಲ್ ಫುತೂಹ್’** ಮಸೀದಿಯಲ್ಲಿ **04-07-14** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ಪಠಿಸಿದರು:

يَا أَيُّهَا الَّذِينَ آمَنُوا كُتِبَ عَلَيْكُمُ الصِّيَامُ كَمَا كُتِبَ عَلَى الَّذِينَ مِنْ قَبْلِكُمْ لَعَلَّكُمْ تَتَّقُونَ

(ಯಾ ಅಯ್ಯುಹಲ್ಲಝೀನ ಆಮನೂ ಕುತಿಬ ಅಲೈಕುಮುಸ್ಸಿಯಾಮು ಕಮಾ ಕುತಿಬ ಅಲಲ್ಲಝೀನ ಮಿನ್ ಖಬ್‌ಲಿಕುಮ್ ಲಅಲ್ಲಕುಮ್ ತತ್ತಖೂನ್)

**“ಓ ವಿಶ್ವಾಸಿಗಳೇ, ನಿಮ್ಮ ಪೂರ್ವಜರಿಗೆ ವಿಧಿಸಲಾದಂತೆ ನಿಮಗೆ ಸಹ ಉಪವಾಸ ವ್ರತವನ್ನು ವಿಧಿಸಲಾಗಿದೆ. ನೀವು ತಖ್ವವನ್ನು ಹೊಂದಿದವರಾಗಲಿಕ್ಕೋಸ್ಕರ.”** (2:184)

ನಾವು ಇನ್ನೊಂದು ರಮಝಾನ್ ತಿಂಗಳಲ್ಲಿ ಉಪವಾಸವನ್ನು ಅನುಷ್ಠಿಸುವ ಭಾಗ್ಯವನ್ನು ಅಲ್ಲಾಹನು ನಮಗೆ ಅನುಗ್ರಹಿಸಿರುವನು. ಈ ತಿಂಗಳು ಎಣಿಸಲಾಗದಷ್ಟು ಅನುಗ್ರಹಗಳನ್ನು ತಂದು ಕೊಡುವಂತಹದಾಗಿದೆ. ಈ ತಿಂಗಳಲ್ಲಿ ಉಪವಾಸವನ್ನು ಅನುಷ್ಠಿಸುವುದು ನಿಮಗೆ ಕಡ್ಡಾಯಗೊಳಿಸಲಾಗಿದೆ ಎಂದು ಅಲ್ಲಾಹನು ಹೇಳುತ್ತಾನೆ. ಯಾಕಾಗಿ ಕಡ್ಡಾಯಗೊಳಿಸಲಾಗಿದೆ? ನೀವು ಬೆಳಗ್ಗಿನಿಂದ ಸಾಯಂಕಾಲ ತನಕ ಹಸಿದಿರಬೇಕೆಂಬ ಉದ್ದೇಶದಿಂದ ಕಡ್ಡಾಯಗೊಳಿಸಲಾಗಿದೆಯೇ? ಅಲ್ಲ, ನೀವು **ತಖ್ವ**ವುಳ್ಳವರಾಗಬೇಕೆಂಬ ಉದ್ದೇಶದಿಂದ ಅದನ್ನು ಕಡ್ಡಾಯಗೊಳಿಸಲಾಗಿದೆ. ಮುಖ್ಯವಾದುದು ಇದೇ ತಖ್ವ ಆಗಿದೆ. ಅದು ಅಸಂಖ್ಯಾತ ಅನುಗ್ರಹಗಳನ್ನು ದೊರಕುವಂತೆ ಮಾಡುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

“ಉಪವಾಸವನ್ನು ಅನುಷ್ಠಿಸುವವನು ಯಾವಾಗಲೂ ನೆನಪಿನಲ್ಲಿಡಬೇಕು– ಉಪವಾಸ ಎಂದರೆ ಕೇವಲ ಹಸಿದಿರುವುದಲ್ಲ. ಉಪವಾಸ ಅನುಷ್ಠಿಸುವವನು ಅಲ್ಲಾಹನ **ಝಿಕ್ರ್‌ನಲ್ಲಿ** (ಸ್ಮರಣೆಯಲ್ಲಿ) ತಲ್ಲೀನನಾಗಿರಬೇಕು. ಅದರ ಮೂಲಕ ಅವನಿಗೆ ಅಲ್ಲಾಹನೊಂದಿಗೆ ಸಂಬಂಧವೂ ಲೌಕಿಕ ಕಾರ್ಯಗಳ ಬಗ್ಗೆ ವಿರಕ್ತಿಯೂ ಉಂಟಾಗಬೇಕು. ಇದನ್ನು **‘ತಬತ್ತುಲ್’** ಮತ್ತು **‘ಇನ್‌ಖಿತಾಅ್’** ಎಂದೆನ್ನುತ್ತಾರೆ. ಇದರ ಅರ್ಥ, **ಅಲ್ಲಾಹನೊಂದಿಗೆ ನಿರಂತರ ಸಂಬಂಧ ಹೊಂದಿರುವುದು ಮತ್ತು ಲೌಕಿಕ ಆಶಾಭಿಲಾಷೆಗಳನ್ನು ಎಸೆದು ಬಿಡುವುದಾಗಿದೆ**. ಈ ದಿನಗಳಲ್ಲಿ ಮನುಷ್ಯನ ಸ್ಥಿತಿ ಹೇಗಿರಬೇಕೆಂದರೆ **ಅವನು ಲೌಕಿಕ ಆಶೆಗಳೊಂದಿಗೆ ಸಂಬಂಧವನ್ನು ವಿಚ್ಛೇಧಿಸಿ ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕೋಸ್ಕರವಾಗಿ ಮಾತ್ರ ಪ್ರತಿಯೊಂದು ಕೆಲಸವನ್ನೂ ಪ್ರಯತ್ನವನ್ನೂ ಮಾಡುವವನಾಗಬೇಕು**.”

“ರಮಝಾನ್ ತಿಂಗಳ ಉಪವಾಸದ ಉದ್ದೇಶವೇನೆಂದರೆ ಮನುಷ್ಯನು ಶರೀರವನ್ನು ಮಾತ್ರ ಪೋಷಿಸುವ ರೊಟ್ಟಿಯನ್ನು ಬಿಟ್ಟು ಆತ್ಮಕ್ಕೆ ಸಮಾಧಾನ ಮತ್ತು ಆತ್ಮದ ಹಸಿವನ್ನು ನಿವಾರಣೆ ಮಾಡುವಂತಹ ರೊಟ್ಟಿಯನ್ನು ಅಲ್ಲಾಹನಿಂದ ಗಳಿಸುತ್ತಾನೆ.

ಯಾರು ಕೇವಲ ಆಚಾರಕ್ಕೋಸ್ಕರ ಉಪವಾಸ ವ್ರತ ಅನುಷ್ಠಿಸದೆ, ಅಲ್ಲಾಹನ ಸಂಪ್ರೀತಿ ಗಳಿಸಲಿಕ್ಕೋಸ್ಕರ ಉಪವಾಸ ಅನುಷ್ಠಿಸುತ್ತಾರೋ ಅವರು **‘ಹಮ್ದ್’** (ಸ್ತುತಿ), **‘ತಸ್‌ಬೀಹ್’** (ಸುಬ್‌ಹಾನಲ್ಲಾಹ) ಮತ್ತು **‘ತಹ್‌ಲೀಲ್’**(ಲಾಇಲಹ ಇಲ್ಲಲ್ಲಾಹ್) ಮೊದಲಾದವುಗಳಲ್ಲಿ ನಿರತರಾಗಬೇಕು. ಅವುಗಳ ಮೂಲಕ ಅವರಿಗೆ ದೈವಿಕ ಆಹಾರ ಲಭಿಸುವುದು.”

ಆದುದರಿಂದ ಸತ್ಯವಿಶ್ವಾಸಿಯಾದವನು ಹಿಂದೆ ಮಾಡುತ್ತಾ ಇದ್ದುದಕ್ಕಿಂತ ಹೆಚ್ಚಾಗಿ ಅಲ್ಲಾಹನನ್ನು ಸ್ತುತಿಸುತ್ತಾ ಇರಬೇಕು. ಮೊದಲಿಗಿಂತ ಹೆಚ್ಚಾಗಿ **‘ತಸ್‌ಬೀಹ್’** ಮೊದಲಾದವುಗಳನ್ನು ಮಾಡಬೇಕು. ಅಲ್ಲಾಹನ ದಾಸತ್ವವನ್ನು ಮತ್ತು ಆರಾಧನೆಯನ್ನು ಕೇವಲ ಬಾಯಿಮಾತಿನಲ್ಲಿ ಪ್ರಕಟಿಸದೆ ತನ್ನ ಆರಾಧನೆಯ ಮಟ್ಟವನ್ನು ಉನ್ನತಗೊಳಿಸಲು ಪ್ರಯತ್ನಿಸಬೇಕು. ಆಗ ಮಾತ್ರ ಉಪವಾಸ ಅನುಷ್ಠಿಸುವುದರ ಅನುಗ್ರಹ ಲಭಿಸುತ್ತದೆ. ಆಗ ಮಾತ್ರ **‘ನೀವು ತಖ್ವವನ್ನು ಅವಲಂಬಿಸಿ ಅಲ್ಲಾಹನ ಸಾಮೀಪ್ಯ ಗಳಿಸಿರಿ’** ಎಂದು ಅಲ್ಲಾಹನು ಹೇಳಿದ ಉದ್ದೇಶಲಕ್ಷ್ಯವನ್ನು ಗಳಿಸಲು ಸಾಧ್ಯವಾಗುವುದು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಒಮ್ಮೆ ಹೇಳಿದರು: **“ಉಪವಾಸ ಗುರಾಣಿ(ಕವಚ)ಯಾಗಿದೆ ಮತ್ತು ನರಕಾಗ್ನಿಯಿಂದ ರಕ್ಷಿಸುವ ಬಲಿಷ್ಠಕೋಟೆಯಾಗಿದೆ.”** ಆದರೆ ನರಕಾಗ್ನಿಯಿಂದ ರಕ್ಷಿಸುವ ಬಲಿಷ್ಠ ಕೋಟೆಯಾಗಬೇಕಾದರೆ ಮನುಷ್ಯನು ತನ್ನ ಪ್ರತಿಯೊಂದು ಕೆಲಸವನ್ನು ಅಲ್ಲಾಹನ ಸಂಪ್ರೀತಿಗಳಿಸಲಿಕ್ಕೋಸ್ಕರ ಮಾಡುವವನಾಗಬೇಕು. ಅಲ್ಲಾಹನ ಸಂಪ್ರೀತಿ ಗಳಿಸುವುದನ್ನು ಯಾವಾಗಲೂ ತನ್ನ ಮುಂದಿರಿಸಬೇಕು. ಹಗಲು ಮತ್ತು ರಾತ್ರಿ **‘ದುಆ’** ಮತ್ತು **‘ಝಿಕ್ರೆ ಇಲಾಹಿ’** ಮಾಡುತ್ತಾ ಇರಲು ಪ್ರಯತ್ನಿಸಬೇಕು. **ತಖ್ವ**ವನ್ನು ಅವಲಂಬಿಸಿ ಜೀವಿಸಬೇಕು.

ನಮ್ಮ ಅಲ್ಲಾಹನು ನಮ್ಮನ್ನು ಬಹಳವಾಗಿ ಪ್ರೀತಿಸುವವನಾಗಿದ್ದಾನೆ. ಅವನಿಗೋಸ್ಕರ ನಾವು ಬಲಿದಾನ ಮಾಡುವವರಾಗೋಣ. ಅವನು ಹೇಳುತ್ತಾನೆ: **ರಮಝಾನ್ ತಿಂಗಳಲ್ಲಿ ನಾನು ದಾಸರಿಗೆ ಬಹಳ ಸಮೀಪವಾಗಿ ಬಂದಿದ್ದೇನೆ. ಆದುದರಿಂದ ನಿಮಗೆ ಸಾಧ್ಯವಿರುವಷ್ಟು ಅನುಗ್ರಹಗಳನ್ನು ಬಾಚಿಕೊಳ್ಳಿರಿ. ನೀವು ತಖ್ವವನ್ನು ಹೊಂದಲು ನಾನು ಹೇಳಿಕೊಟ್ಟ ವಿಧಿ ವಿಧಾನಗಳನ್ನು ಅನುಸರಿಸಿ ನಡೆಯಲು ಪ್ರಯತ್ನಿಸಿರಿ. ಹಾಗೆ ಮಾಡಿದರೆ ನೀವು ನಿಮ್ಮ ಇಹಲೋಕದ ಮತ್ತು ಪರಲೋಕದ ಸ್ಥಿತಿ ಉತ್ತಮ ಗೊಳಿಸುವವರಾಗುವಿರಿ.**

ರಮಝಾನ್ ಒಂದು ತಿಂಗಳ ತರಬೇತಿ ಶಿಬಿರವಾಗಿದೆ. ಇದರಿಂದ ಧಾರಾಳ ಲಾಭ ಪಡೆಯಲು ಪ್ರಯತ್ನಿಸಿರಿ. ಈ ದಿನಗಳಲ್ಲಿ ನೀವು ಮಾಡುವ ಸತ್ಕರ್ಮಗಳು ಇತರ ದಿನಗಳಲ್ಲಿ ಮಾಡುವ ಸತ್ಕರ್ಮಗಳಿಗಿಂತ ಅನೇಕ ಪಟ್ಟು ಹೆಚ್ಚು ಪುಣ್ಯವನ್ನು ಗಳಿಸಲು ನಿಮ್ಮನ್ನು ಅರ್ಹರನ್ನಾಗಿ ಮಾಡುವುವು.

ಅಲ್ಲಾಹನು ಹೇಳುತ್ತಾನೆ, **"ಎದ್ದೇಳಿರಿ, ನನ್ನ ಆಜ್ಞೆಗಳ ಪ್ರಕಾರ ನಿಮ್ಮ ಆರಾಧನೆಗಳನ್ನು ಸರಿಯಾಗಿ ಅನುಷ್ಠಿಸಿರಿ. ನಾವು ಯಾವಾಗಲೂ ನಮ್ಮ ಆರಾಧನೆಗಳನ್ನು ಸರಿಯಾಗಿ ಅನುಷ್ಠಿಸಲು ಪ್ರಯತ್ನಿಸುವೆವು ಎಂಬ ದೃಢ ಪ್ರತಿಜ್ಞೆಯೊಂದಿಗೆ ಆರಾಧನೆಯನ್ನು ಸರಿಯಾಗಿ ಅನುಷ್ಠಿಸಲು ಪ್ರಯತ್ನಿಸಿರಿ."**

ಆದುದರಿಂದ ನೀವು ಎದ್ದೇಳಿರಿ, ನೀವು ನಿಮ್ಮ ಕರ್ಮಗಳನ್ನು ಸುಂದರಗೊಳಿಸಿರಿ. ಅಲ್ಲಾಹನ ಪ್ರೀತಿ ಗಳಿಸುವ ಹಾಗೆ ಮಾಡಿರಿ. ನೀವು ನಿಮ್ಮ ಕೆಲಸಗಳನ್ನು ಹೇಗೆ ಸುಂದರಗೊಳಿಸಲು ಪ್ರಯತ್ನಿಸಬೇಕೆಂದರೆ **"ನಾವು ಇನ್ನು ಮುಂದೆ ಇದನ್ನು ನಮ್ಮ ಜೀವನದ ಭಾಗವನ್ನಾಗಿ ಮಾಡುವೆವು."** ಎಂಬ ನಿರ್ಧಾರ ಹೊಂದಿರಿ.

ಎದ್ದೇಳಿರಿ, "**ಧರ್ಮಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವೆವು**" ಎಂಬ ಪ್ರತಿಜ್ಞೆ ನೀವು ಮಾಡಿದುದರ ಸರಿಯಾದ ಅರ್ಥವೇನೆಂದು ತಿಳಿದುಕೊಳ್ಳಲು ಈ ತಿಂಗಳಲ್ಲಿ ಪ್ರಯತ್ನಿಸಿರಿ. **ನಮ್ಮ ಜೀವಿತದ ಉದ್ದೇಶಲಕ್ಷ್ಯ ಇದೇ ಆಗಿದೆ ಎಂದು ನೀವು ಯೋಚಿಸಿಕೊಂಡು ವರ್ತಿಸಿರಿ**. ಅಲ್ಲಾಹನು ಹೇಳಿದ **ವಲಾ ತಶ್‌ತರೂ ಬಿ ಆಯಾತೀ ಸಮನನ್ ಖಲೀಲ ಫ ಇಯ್ಯಾಯ ಫತ್ತಖೂನ್ – "ನನ್ನ ವಚನಗಳಿಗೆ ಬದಲಾಗಿ ತುಚ್ಛವಾದ ಬೆಲೆಯನ್ನು ಪಡಕೊಳ್ಳಬೇಡಿರಿ. ನನ್ನನ್ನು ಮಾತ್ರ ಭಯಪಡಿರಿ.**" ಎಂಬ ವಚನವನ್ನು ಸದಾ ನೆನಪಿನಲ್ಲಿಡಿರಿ.

ಅಲ್ಲಾಹನು ಹೇಳಿದುದರ ಅರ್ಥವೇನೆಂದರೆ– ನಾನು ಹೇಳಿದುದು ಧರ್ಮಕ್ಕೆ ಸಂಬಂಧಿಸಿರುವುದಾಗಿದೆ. ಅದಕ್ಕೆ ಬದಲಾಗಿ ನೀವು ಲೌಕಿಕ ಲಾಭವನ್ನು ಆಶಿಸಬೇಡಿರಿ.

ನೀವು ನೆನಪಿಡಿರಿ ಧರ್ಮದ ಎದುರಿಗೆ ಲೌಕಿಕ ಕಾರ್ಯಗಳು ತೀರಾ ತುಚ್ಛವಾಗಿದೆ. ಈ ಯೋಚನೆ ನಮ್ಮ ಪೈಕಿ ಎಲ್ಲರಿಗೂ ಇರಬೇಕು. ಹಾಗೆ ಆಗುವುದಾದರೆ ಮಾತ್ರ ನಾವು ರಮಝಾನ್ ತಿಂಗಳ ವಾಸ್ತವಿಕ ಲಾಭವನ್ನು ಪಡೆಯುವವರಾಗುವೆವು.

ಇತ್ತೀಚೆಗೆ ಇಲ್ಲಿ ಧಾರ್ಮಿಕ ಜ್ಞಾನವನ್ನು ಕಲಿಸುತ್ತಿರುವ ಒಬ್ಬ ಪ್ರೊಫೆಸರ್, ಈಗ ಖಿಲಾಫತ್ ಬಗ್ಗೆ ಚರ್ಚೆ ನಡೆಯುತ್ತಿರುವುದಕ್ಕೆ ಸಂಬಂಧಿಸಿ ತನ್ನ ಅಭಿಪ್ರಾಯ ಸೂಚಿಸುವಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಬಗ್ಗೆ ಮತ್ತು ಇಸ್ಲಾಮ್ ಧರ್ಮದ ನಾಲ್ಕು ಮುಖ್ಯ ಖಲೀಫರ ಬಗ್ಗೆ ತಪ್ಪು ಹೇಳಿಕೆಗಳನ್ನು ನೀಡಿದರು. ಮುಸ್ಲಿಮ್ ಮತ ಪಂಡಿತರು, ಮುಸ್ಲಿಮ್ ಸಂಘ ಸಂಸ್ಥೆಗಳು, ಮುಸ್ಲಿಮ್ ನಾಯಕರು ಮತ್ತು ಸರಕಾರಗಳು ತಮ್ಮ ಭೌತಿಕ ಶಕ್ತಿಗಳನ್ನು ಸಂರಕ್ಷಿಸಲು ಮಾತ್ರ ಚಿಂತಿಸುತ್ತಾ ಇರುತ್ತಾರೆ. ಅವರು ಅದೇ ಚಿಂತೆಯಲ್ಲಿ ತಲ್ಲೀನರಾಗಿರುತ್ತಾರೆ. ಮೇಲೆ ಹೇಳಿದ ತಪ್ಪು ಹೇಳಿಕೆಗಳಿಗೆ ಉತ್ತರ ನೀಡಿ ಅವರ ಬಾಯಿ ಮುಚ್ಚಿಸುವವರು ಅಹ್ಮದಿಯಾ ಜಮಾಅತ್ ಮಾತ್ರವಾಗಿದೆ. ನಾವು ಆಕ್ಷೇಪಗಳಿಗೆ ಉತ್ತರ ನೀಡಿದೆವು. ಹೀಗೆ ಆಕ್ಷೇಪಿಸುವವರು ಇಸ್ಲಾಮಿನ ಶತ್ರುಗಳಾಗಿದ್ದಾರೆ. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಬಗ್ಗೆ ಅಸೂಯೆ ಮತ್ತು ದ್ವೇಷ ಹೊಂದಿದ್ದಾರೆ. ಈ ಜನರು ಈಗ ಒಂದು ಚಲಚಿತ್ರ ನಿರ್ಮಿಸಿದ್ದಾರೆ. ಅದನ್ನು ಇಂದು ವಾಶಿಂಗ್‌ಟನ್‌ನಲ್ಲೂ ಜರ್ಮನಿಯ ಬರ್ಲಿನ್‌ನಲ್ಲೂ ಪ್ರದರ್ಶನಕ್ಕೆ ಬಿಡುಗಡೆಗೊಳಿಸಲಾಗುತ್ತಿದೆ. ಈ ಚಲಚಿತ್ರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಮತ್ತು ಹಝ್ರತ್ ಆಯಿಶಾ ರಝಿಯಲ್ಲಾ ಅನ್‌ಹಾರ ಬಗ್ಗೆಯಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಪರಿಹಾಸಕ್ಕೆ ಗುರಿಪಡಿಸಬಹುದೆಂದು ಈ ಜನರು ಭಾವಿಸುತ್ತಾರೆ (ನವೂದುಬಿಲ್ಲಾಹ್). ಇಂತಹ ಜನರ ಲೌಕಿಕ ಜೀವಿತವೂ ನಾಶವಾಗಲಿದೆ; ಅವರ ಅಂತಿಮ ಗತಿಯೂ ಕೆಟ್ಟದಾಗಿರುವುದು. ಅವರಿಗೆ ತಮ್ಮ ಪರ್ಯವಸಾನದ ಬಗ್ಗೆ ತಿಳಿದಿಲ್ಲ. ಅವರು ದುರ್ಗತಿಗೆ ತಲಪುವರೆಂದು ಅಲ್ಲಾಹನು ಹೇಳುತ್ತಾನೆ.

ನಾವು ಸರಕಾರದ ಕಾನೂನು ಕಾಯಿದೆಗಳಿಗೆ ಅಧೀನವಾಗಿ ಪ್ರತಿಭಟನೆ ನಡೆಸಲು ಪ್ರಯತ್ನಿಸಬೇಕು. ಇದರ ಬಗ್ಗೆ ಜರ್ಮನಿಯ ಜಮಾಅತಿನೊಂದಿಗೆ ನಾನು ನಿನ್ನೆಯೇ ಹೇಳಿದ್ದೇನೆ. ಅಮೇರಿಕದಲ್ಲಿ ಸಹ ಜಮಾಅತ್ ಇದರ ಬಗ್ಗೆ ಧಾರಾಳ ಪ್ರಯತ್ನ ಮಾಡುತ್ತಿದೆಯೆಂದು ತಿಳಿದು ಬಂದಿದೆ. ಆದರೆ ಒಬ್ಬ ಅಹ್ಮದಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಬಗ್ಗೆ ನೈಜ ಪ್ರೀತಿಯನ್ನು ಸೂಚಿಸಲು ಮತ್ತು ಅವರ ಉನ್ನತ ಸ್ಥಾನವನ್ನು ಪ್ರಕಟಿಸಲು ಹೆಚ್ಚು ಹೆಚ್ಚಾಗಿ **ದುರೂದ್** ಪ್ರಾರ್ಥನೆ ಮಾಡಬೇಕು (ಸಲಾತ್ ಹೇಳಬೇಕು). ಅದು ಹೀಗೆ:

سبحان اللہ وبحمدہ سبحان اللہ العظیم اللھم صل علیٰ محمد وآل محمد

(ಸುಬ್‌ಹಾನಲ್ಲಾಹಿ ವಬಿಹಮ್‌ದಿಹೀ ಸುಬ್‌ಹಾನಲ್ಲಾಹಿಲ್ ಅಝೀಮ್. ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದ್)

ಲೋಕದಲ್ಲಿರುವ ಪ್ರತಿಯೊಬ್ಬ ಅಹ್ಮದಿ ಇಂದಿನ ಪರಿಸ್ಥಿತಿಯಲ್ಲಿ ರಮಝಾನ್ ತಿಂಗಳನ್ನು ದುರೂದ್ ಪ್ರಾರ್ಥನೆಯಿಂದ ತುಂಬಿಸಬೇಕು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ವಿರುದ್ಧ ಶತ್ರುಗಳು ಮಾಡುವ ಆಕ್ರಮಣಗಳಿಗೆ ಸರಿಯಾದ ಉತ್ತರ ಇದೇ ಆಗಿದೆ. ಇದಕ್ಕಿಂತ ಉತ್ತಮವಾದ ಉತ್ತರ ಬೇರೆ ಇಲ್ಲ. ಇದು ನಮ್ಮಲ್ಲಿ ತಖ್ವವನ್ನು ಉಂಟುಮಾಡುವಂತಹದು ಸಹ ಆಗಿದೆ. ತಖ್ವವನ್ನು ಹೊಂದುವುದರಿಂದ ಉಂಟಾಗುವ ಉತ್ತಮ ಪರಿಣಾಮಗಳ ಬಗ್ಗೆ ಅಲ್ಲಾಹನು ನಮಗೆ ತಿಳಿಸಿರುವನು. ತಖ್ವವನ್ನು ಹೊಂದಿರುವ ಮುತ್ತಖಿಗಳ ಅಂತಿಮ ಗತಿ ಬಹಳ ಉತ್ತಮವಾಗಿರುವುದೆಂದು ಅಲ್ಲಾಹನು ಹೇಳಿರುವನು:

ومن يتق الله يجعل له مخرجا ويرزقه من حيث لا يحتسب. ومن يتوكل على الله فهو حسبه

(ವ ಮನ್ ಯತ್ತಖಿಲ್ಲಾಹ ಯಜ್‌ಅಲ್ಲಹೂ ಮಖ್‌ರಜನ್ ವ ಯರ್‌ಝುಖ್‌ಹು ಮಿನ್ ಹೈಸು ಲಾ ಯಹ್‌ತಸಿಬ್)

**"ಯಾರಾದರೂ ಅಲ್ಲಾಹನ ಭಯಭಕ್ತಿ(ತಖ್ವ) ಹೊಂದಿದ್ದರೆ ಅವನಿಗೆ ಅಲ್ಲಾಹನು (ಸಂಕಷ್ಟಗಳಿಂದ) ಪಾರಾಗುವ ಮಾರ್ಗವನ್ನು ಮಾಡಿಕೊಡುವನು. ಅವನು ನಿರೀಕ್ಷಿಸದ ಕಡೆಯಿಂದ ಅಲ್ಲಾಹನು ಅವನಿಗೆ ಜೀವನೋಪಾಯವನ್ನು ದಯಪಾಲಿಸುವನು. ಯಾರು ಅಲ್ಲಾಹನ ಮೇಲೆ ಭರವಸೆ ಇಡುತ್ತಾನೋ ಅವನಿಗೆ ಅಲ್ಲಾಹನು ಸಾಕು."**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: ನಾವು ತಖ್ವ ಮತ್ತು ಪರಿಶುದ್ಧತೆಯಲ್ಲಿ ಎಷ್ಟರ ಮಟ್ಟಿಗೆ ಅಭಿವೃದ್ಧಿಯನ್ನು ಹೊಂದಿದ್ದೇವೆ ಎನ್ನುವುದರ ಬಗ್ಗೆ ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು. ಅದರ ಉನ್ನತ ಮಟ್ಟದ ಬಗ್ಗೆ ಪವಿತ್ರ ಖುರ್‌ಆನ್ ವಿವರಿಸಿದೆ. ಅಲ್ಲಾಹನು ತಖ್ವ ಹೊಂದಿದ ಮುತ್ತಖಿಯ ಒಂದು ಚಿಹ್ನೆಯಾಗಿ ಹೀಗೆ ಹೇಳಿದ್ದಾನೆ ಲೌಕಿಕವಾದ ಅಸಹ್ಯ ಕೆಲಸಗಳಿಂದ ಅಲ್ಲಾಹನು ಮುತ್ತಖಿಯನ್ನು ಸ್ವತಂತ್ರನನ್ನಾಗಿ ಮಾಡುತ್ತಾನೆ ಮತ್ತು ಅವನ ಕೆಲಸಗಳನ್ನು ಅಲ್ಲಾಹನೇ ಸ್ವತಃ ಮೇಲ್ವಿಚಾರಣೆ ಮಾಡುತ್ತಾನೆ. ಇದರ ಬಗ್ಗೆಯೇ ಅಲ್ಲಾಹನು ಹೇಳಿರುವುದು:-

وَمَنْ يَّتَّقِ اللّٰهَ يَجْعَلْ لَّهٗ مَخْرَجًا وَّيَرْزُقْهُ مِنْ حَيْثُ لَا يَحْتَسِبُ.

(ವ ಮನ್ ಯತ್ತಖಿಲ್ಲಾಹ ಯಜ್‌ಅಲ್ಲಹೂ ಮಖ್‌ರಜನ್ ವ ಯರ್‌ಝುಖ್‌ಹೂ ಮಿನ್ ಹೈಸು ಲಾ ಯಹ್‌ತಸಿಬ್)

**"ಯಾರು ಅಲ್ಲಾಹನನ್ನು ಭಯಪಡುತ್ತಾನೋ ಪ್ರತಿಯೊಂದು ಕಷ್ಟದ ಸಂದರ್ಭದಲ್ಲಿ ಅವನಿಗೆ ಅಲ್ಲಾಹನು ಕಷ್ಟದಿಂದ ಪಾರಾಗುವ ಉತ್ತಮ ಮಾರ್ಗವನ್ನು ಉಂಟುಮಾಡುತ್ತಾನೆ ಮತ್ತು ಅವನು ಊಹಿಸದ ಕಡೆಯಿಂದ ಅವನಿಗೆ ಜೀವನಾಧಾರವನ್ನು ಒದಗಿಸಿಕೊಡುತ್ತಾನೆ."** ಅಂದರೆ, ಅಲ್ಲಾಹನು ಮುತ್ತಖಿಗೆ ಕೆಟ್ಟಕೆಲಸಗಳನ್ನು ಮಾಡುವ ಆವಶ್ಯಕತೆ ಇಲ್ಲದಂತೆ ಮಾಡುತ್ತಾನೆಂಬುದು ಸಹ ಮುತ್ತಖಿಯ ಒಂದು ಚಿಹ್ನೆಯಾಗಿದೆ. ಉದಾಹರಣೆಗೆ ಒಬ್ಬ ವ್ಯಾಪಾರಿ ಸುಳ್ಳು ಹೇಳದೆ ತನ್ನ ವ್ಯಾಪಾರ ಸಾಗಲಾರದೆಂದು ಭಾವಿಸುತ್ತಾನೆ. ಆದುದರಿಂದ ಅವನು ಸುಳ್ಳು ಹೇಳುವುದನ್ನು ಬಿಡುವುದಿಲ್ಲ. ಸುಳ್ಳು ಹೇಳಲು ನಾನು ನಿರ್ಬಂಧಿತನಾಗಿದ್ದೇನೆಂದು ಅವನು ಹೇಳುತ್ತಾನೆ. ಆದರೆ ಈ ಸಂಗತಿ ಯಾವ ಕಾರಣಕ್ಕೂ ಸರಿಯಲ್ಲ. ಅಲ್ಲಾಹನು ಮುತ್ತಖಿಯನ್ನು ಸ್ವತಃ ಸಂರಕ್ಷಿಸುತ್ತಾನೆ ಮತ್ತು ಸುಳ್ಳು ಹೇಳದಂತೆ ರಕ್ಷಿಸುತ್ತಾನೆ. ಸುಳ್ಳು ಹೇಳುವ ಸಂದರ್ಭ ಮುತ್ತಖಿಗೆ ಉಂಟಾಗದಂತೆ ಅಲ್ಲಾಹನು ಕಾಪಾಡುತ್ತಾನೆ.

ಒಬ್ಬ ವ್ಯಕ್ತಿ ನಿಜವಾಗಿಯೂ ಮುತ್ತಖಿಯಾಗಿದ್ದರೆ ಮತ್ತು ಅವನು ಅಲ್ಲಾಹನ ಸಂಪ್ರೀತಿ ಗಳಿಸಲು ಪ್ರಯತ್ನ ಮಾಡುತ್ತಾ ಇದ್ದರೆ ಅವನಿಗೆ ಸ್ವಲ್ಪ ಅನುಕೂಲತೆ ಲಭಿಸಿದರೂ ಅದರಿಂದ ಅವನಿಗೆ ಸಮಾಧಾನ ಸಿಗುತ್ತದೆ. ಅನಾವಶ್ಯಕವಾದ ಆಶಾಭಿಲಾಷೆಗಳನ್ನು ಹೊಂದದಿರುವುದು ಸಹ ಅಲ್ಲಾಹನ ಒಂದು ಅನುಗ್ರಹವಾಗಿದೆ. ಆದುದರಿಂದ ಪ್ರತಿಯೊಬ್ಬ ಅಹ್ಮದಿ ಈ ವಿಷಯದ ಬಗ್ಗೆ ಗಮನಿಸಬೇಕು. ರಮಝಾನ್ ತಿಂಗಳಲ್ಲಿ ಪ್ರತಿಯೊಬ್ಬ ಅಹ್ಮದಿ ತನ್ನ ತಖ್ವವನ್ನು ಎಂತಹ ಮಟ್ಟಕ್ಕೆ ತರಲು ಪ್ರಯತ್ನ ಮಾಡಬೇಕೆಂದರೆ ಅವನ ಆಶಾಭಿಲಾಷೆಗಳು ಅಲ್ಲಾಹನು ಅನುಮತಿ ನೀಡಿದ ಚೌಕಟ್ಟಿನೊಳಗೆ ಸೀಮಿತಗೊಳ್ಳಬೇಕು. ಹಣ ಸಂಪಾದನೆ ಮಾಡುವುದು ಸಹ ತಖ್ವವನ್ನು ಅವಲಂಬಿಸಿ ಆಗಬೇಕು. ಅಂತಹ ಶ್ರೀಮಂತನಾದ ಮುತ್ತಖಿ ತನ್ನ ಸಂಪತ್ತನ್ನು ಅಲ್ಲಾಹನ ಪ್ರೀತಿಯನ್ನು ಸಂಪಾದಿಸಲು ಖರ್ಚು ಮಾಡುತ್ತಾನೆ.

ಈ ರಮಝಾನಿನಲ್ಲಿ ಶತ್ರುಗಳ ಕೆಡುಕುಗಳಿಂದ ಸಂರಕ್ಷಣೆ ಪಡೆಯಲು ಸಹ ಪ್ರಾರ್ಥಿಸಿರಿ. ಮುಸ್ಲಿಮ್ ಸಮುದಾಯದ ಬಗ್ಗೆ ಸಹ ಅಲ್ಲಾಹನೊಂದಿಗೆ ಪ್ರಾರ್ಥಿಸಿರಿ. ಅಲ್ಲಾಹನು ದಯೆದೋರಲಿ ಮತ್ತು ಅವರಿಗೆ ವಿವೇಕವನ್ನು ದಯಪಾಲಿಸಲಿ. ಎಲ್ಲೆಲ್ಲಾ ಅಹ್ಮದಿಯರ ಮೇಲೆ ದೌರ್ಜನ್ಯ ನಡೆಯುತ್ತಿದೆಯೋ ಅಲ್ಲೆಲ್ಲಾ ದೌರ್ಜನ್ಯದಿಂದ ಅಲ್ಲಾಹನು ಅವರನ್ನು ರಕ್ಷಿಸಲಿ. ಎಲ್ಲದಕ್ಕಿಂತ ಮಿಗಿಲಾಗಿ ಅಲ್ಲಾಹನು ನಮಗೆ ನಿಜವಾದ ತಖ್ವ ದಯಪಾಲಿಸಲಿ. ನಾವು ಅಲ್ಲಾಹನ ಪ್ರೀತಿ ಸಂಪಾದಿಸುವವರಾಗೋಣ. ಧರ್ಮದ ವಿರೋಧಿಗಳು ಮತ್ತು ಇಸ್ಲಾಮಿನ ಶತ್ರುಗಳು ಅಲ್ಲಾಹನ ಅನುಗ್ರಹದಿಂದ ಸೋತು ಹೋಗುವುದನ್ನು ನಾವು ಕಾಣುವಂತಾಗಲಿ. ರಮಝಾನ್ ತಿಂಗಳಲ್ಲಿ ಅಲ್ಲಾಹನು ನಮ್ಮೊಳಗೆ ಒಂದು ವಾಸ್ತವಿಕ ಕ್ರಾಂತಿಯನ್ನು ಉಂಟುಮಾಡುವಂತಾಗಲಿ- **ಆಮೀನ್**.

---------------*****---------------

*Friday Sermon delivered by Hadrath Khaleefatul Masih Al Khamis(atba)*

*at Masjid Baithul Futhuh, London on 04-07-2014*

***Kannada Translation:*** M Ubeidullah

***Reviewed by:*** M P Ibrahim | ***Typing:*** U Basheer Ahmad

*Published By**: Kannada Khutuba Desk** (comes under the **Kannada Isha'at Team**)*

*Ahmadiyya Muslim Jama`at, Karnataka*

*Email*: **khutuba.kannada@gmail.com**